



ವ್ಯವಸ್ಥೆಯ ಭಿನ್ನತೆಯೂ ಕಾಣಸಿಗುತ್ತದೆ. ಯಾವ ಜನರಿಗಾಗಿ ಕ್ರಾಂತಿಯ ಬೀಜಗಳನ್ನು ಬಿತ್ತುತ್ತಿದ್ದಾರೋ ಆ ಜನರು ನಕ್ಸಲೀಯರ ಕಾರ್ಯಚಟುವಟಿಕೆಗಳ ಕೇಂದ್ರವಾಗಿಲ್ಲ. ನಕ್ಸಲೀಯರು ತಮ್ಮ ಆಂತರಿಕ ವ್ಯವಸ್ಥೆ, ಪ್ರಸ್ತುತ ಅಧಿಕಾರದಲ್ಲಿರುವ ಸರ್ಕಾರ ಮತ್ತದರ ಯಂತ್ರಾಂಗ, ನಕ್ಸಲ್ ಚಳವಳಿಗೆ ಬೇಕಾಗಬಹುದಾದ ಶಸ್ತ್ರಾಸ್ತ್ರ ಮತ್ತು ಆರ್ಥಿಕ ಸಂಪನ್ಮೂಲಗಳನ್ನು ಏರ್ಪಾಟು ಮಾಡುವ ಯೋಜನೆ ಮತ್ತು ತಮ್ಮಲ್ಲೇ ಇರಬಹುದಾದ ಅಂತರ್ ದ್ವಂದ್ವಗಳ ನಡುವೆ ನಲುಗುತ್ತಿರುವುದನ್ನು ಕಾಣಬಹುದು. ವಿಚಾರಧಾರೆಯೇ ಮುಖ್ಯವಾಗದೆ ಹೋದಾಗ ಜನರ ತಕ್ಷಣದ ಸಮಸ್ಯೆಗಳು ಆ ಹೋರಾಟದ ಹಿಂದೆ ಗೌಣವಾಗುತ್ತವೆ ಎನ್ನುವುದನ್ನು ಅಲ್ಪಾ ತೋರಿಸಿಕೊಡುತ್ತಾರೆ. ಈ ಹಿನ್ನೆಲೆಯಲ್ಲಿ ನೋಡಿದಾಗ, ಗೀತಾ ರಾಮಸ್ವಾಮಿಯವರ ಪುಸ್ತಕ ಒಂದು ಭಿನ್ನ ನೆಲೆಯಲ್ಲಿ ಕೆಲಸ ಮಾಡುವುದನ್ನು ಗಮನಿಸಬಹುದು.

ಗೀತಾರ ಪುಸ್ತಕದಲ್ಲಿ ವಿಚಿತ್ರ ಪ್ರಾಮಾಣಿಕತೆಯಿದೆ. ತಮ್ಮ ಜೀವನವನ್ನು ಭವ್ಯವಾಗಿ, ಒಬ್ಬ ಸಾಧಕಿಯಾಗಿ ಕಾಣಿಸುವ ಯತ್ನವನ್ನು ಅವರು ಮಾಡುವುದಿಲ್ಲ. ಇತರರನ್ನು ಕಂಡಷ್ಟೇ ಕಟುವಾಗಿ ತಮ್ಮನ್ನೂ ಕಾಣುತ್ತಾರೆ. ಆತ್ಮಕಥೆಗಳಲ್ಲಿರಬಹುದಾದ ರೋಚಕ ಅಥವಾ ವಿವಾದಕ್ಕೊಳಗಾಗಬಹುದಾದ ಹಗರಣಗಳಿಲ್ಲ. ಈ ಹೋರಾಟದಲ್ಲಿ ಯಾವುದೇ ಯಶಸ್ಸಿನ ಗಾಥೆಯೂ ಕಾಣುವುದಿಲ್ಲ. ಗೆಲುವುಗಳಿಲ್ಲವೆಂದಲ್ಲ. ಆದರೆ, ಗೆಲುವು ಅಥವಾ ಯಶಸ್ಸಿನೊಂದಿಗೆ ಈ ಕಥನ ನಿಲ್ಲುವುದಿಲ್ಲ. ಬದಲಿಗೆ ಈ ಕಥನ ಮುಂದಿನ ಬಿಡಿಸಲಾಗದ ಜಟಿಲ ಸಮಸ್ಯೆಯತ್ತ ನಮ್ಮನ್ನು ಒಯ್ಯುತ್ತದೆ. ಒಂದು ಪುಟ್ಟ ಹೆಜ್ಜೆ ಮುಂದಕ್ಕೆ ಹೋಗುವ ಅನುಭವ ನೀಡಿದರೂ ಅಲ್ಲಿನ ನಿರಾಳತೆ ಇನ್ನೂ ಆಳವಾದ ಪ್ರಪಾತಕ್ಕೆ ಜಾರಲಿಲ್ಲ ಎನ್ನುವುದರಿಂದ ಬರುವ ಸಮಾಧಾನವೇ ಆಗಿದೆ. ಅಲ್ಲಿನ ಸಮಾಧಾನ ಪ್ರಗತಿಯ ಸಾಧನೆಯಿಂದಲ್ಲ. ಸಾಧನೆಯೇ ಒಂದು ಯಥಾಸ್ಥಿತಿವಾದದ ಪ್ರತೀಕವಾಗಿ ಯಶಸ್ಸಿನ ಕ್ಷಣಭಂಗುರತೆಯನ್ನು ನಮ್ಮ ಮುಂದೆ ತೆರೆದಿಡುವುದರಲ್ಲಿ ಅವರು ಸಫಲರಾಗುತ್ತಾರೆ. ಇದು ಜಿಮ್‌ನಲ್ಲಿನ ಟ್ರೆಡ್‌ಮಿಲ್ಲಿನಂತೆ, ಬೆವರು ಸುರಿಸಿ ಕ್ಯಾಲೋರಿಗಳನ್ನು ಕರಗಿಸಿ ಮುಂದೆ ಹೋದಂತೆನ್ನಿಸಿದರೂ, ನಿಂತಲ್ಲೇ ನಿಂತಿರುತ್ತೇವೆ. ಆಳ ಪ್ರಪಾತದಲ್ಲಿ ಬೀಳಲಿಲ್ಲವೆನ್ನುವುದೇ ಸದ್ಯದ ಸಮಾಧಾನವಾಗುತ್ತದೆ.

ವರ್ಷಗಳ ಹಿಂದೆ ನನ್ನ ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡಲು ಸೇವಾಸಂಸ್ಥೆಯ ಸಾಮಾಜಿಕ ಕಾರ್ಯಕರ್ತೆ ಇಳಾ ಭಟ್ ಅವರನ್ನು ಆಹ್ವಾನಿಸಿದ್ದೆ. ಆಕೆಯ ಭಾಷಣದ ನಂತರ ಒಬ್ಬ ವಿದ್ಯಾರ್ಥಿನಿ ಈ ಪ್ರಶ್ನೆಯನ್ನು ಕೇಳಿದ್ದಳು: 'ನಿಮ್ಮ ಜೀವನದಲ್ಲಿ ನೀವು ರೂಪಿಸಿಕೊಂಡಿದ್ದ ಗುರಿಗಳೇನು ಮತ್ತು ಎಷ್ಟರ ಮಟ್ಟಿಗೆ ಅವುಗಳನ್ನು ಸಾಧಿಸುವಲ್ಲಿ ಸಫಲರಾಗಿದ್ದೀರಿ?' ಪೈಪೋಟಿಯಿರುವ ಮ್ಯಾನೇಜ್‌ಮೆಂಟ್ ಸಂಸ್ಥೆಯಲ್ಲಿ ಈ ಪ್ರಶ್ನೆ ಸಹಜ. ಇಳಾ ಭಟ್ ಕೊಟ್ಟ ಉತ್ತರ ಆಸಕ್ತಿಕರವಾಗಿತ್ತು. 'ಜೀವನದಲ್ಲಿ ಯಾವುದೇ ಗುರಿಯಿರಲಿಲ್ಲ; ಕೆಲವು ಸಮಸ್ಯೆಗಳನ್ನು ನಮ್ಮ ಮಹಿಳೆಯರು ಎದುರಿಸುತ್ತಿದ್ದರು. ಅದಕ್ಕೆ ಒಂದು ಉಪಾಯವನ್ನು ಹುಡುಕುವ ದಿಕ್ಕಿನಲ್ಲಿ ಕೆಲಸ ಮಾಡಿದೆವು. ಆ ಸಮಸ್ಯೆಗಳನ್ನು ಬಗೆಹರಿಸಿದೆವು ಎನ್ನುವಷ್ಟರಲ್ಲಿ ಬೇರೆ ಸಮಸ್ಯೆಗಳು ಬಂದವು. ಅವುಗಳನ್ನು ಪರಿಹರಿಸಲು ಕೆಲಸ ಮಾಡುತ್ತಾ ಮುಂದುವರೆದೆವು. ಹೀಗೆ ಇದು ಒಂದು ಚೌಕಟ್ಟಿಗೆ ದಕ್ಕುವುದಲ್ಲ. ಬದಲಿಗೆ ಇದೊಂದು ನಿರಂತರ ಯಾತ್ರೆ.'